‘ಮುತ್ತುಚಾಂಡಿ, ನೀನೇ ಇದಕ್ಕೊಂದು ದಾರಿ ತೋರಿಸ್ಬೇಕು. ನಿನ್ನೆ ದಿನ ನಾನು ಏನು ಹೇಳಿದೆ ಅನ್ನೋದು ನನಗೆ ಗೊತ್ತಿಲ್ಲ. ಈಗ ಬಾಯಿ ತಪ್ಪಿ ಕಾಕುಟ್ಟನ ವಿಷಯ ಆಡಿದೆ’

ಪಾಂಬುವಿನ ಮಾತಿಗೆ ಕಿವಿಗೊಡುತ್ತಿದ್ದ ಇನ್ಸ್‌ಪೆಕ್ಟರ್ ರಾಜಧಾನಿ ಫೈಲ್‌ನಲ್ಲಿ ಮುಳುಗಿರುವಂತೆಯೆ ಮುತ್ತುಚಾಂಡಿ ಓರೆ ಕಣ್ಣಿನಿಂದ ಅವನನ್ನು ಗಮನಿಸಿದ. ಪಾಂಬುವಿಗೆ ಏನಾದರೂ ಸಾಂತ್ವನ ನೀಡಲೇ ಬೇಕಿತ್ತು. ಅವನನ್ನು ಪಕ್ಕಕ್ಕೆ ಕರೆದು ಹೇಳಿದ.

‘ನೋಡು, ನೀನು ತಪ್ಪು ಮಾಡಿರುವುದನ್ನು ಒಪ್ಪಿಕೋ. ಯಾವುದೇ ರಗಳೆ ಇರೋಲ್ಲ. ಒಂದು ಸುಳ್ಳನ್ನು ಮುಚ್ಚುವುದಕ್ಕೆ ನೀನು ಇನ್ನೊಂದು ಸುಳ್ಳು ಹೇಳ್ಬೇಕಾಗುತ್ತೆ. ಇದರಿಂದ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುತ್ತವೆ. ಆದ್ದರಿಂದ ಸತ್ಯ ಏನೂಂತ ಹೇಳಿ ಬಿಡು’ ಸಾಂತ್ವನದ ಮಾತುಗಳಾದರೂ ಪಾಂಬುವನ್ನು ತಿವಿಯುವಂತೆ ಇತ್ತು ಮುತ್ತುಚಾಂಡಿಯ ಮಾತುಗಳು.

‘ಸರಿ, ನೀನು ಹೇಳಿದ ಹಾಗೆ ಮಾಡ್ತೀನಿ. ಇದರಿಂದ ನನಗೇನಾದರೂ ತೊಂದರೆಯಾದರೆ ನೀನೇ ನನ್ನನ್ನು ಕಾಪಾಡ್ಬೇಕು, ಮುತ್ತುಚಾಂಡಿ’ ಸೋಲಿನ ದನಿಯಲ್ಲಿ ಹೇಳಿದ ಪಾಂಬು.

ಇನ್ಸ್‌ಪೆಕ್ಟರ್ ರಾಜಧಾನಿ ಲಹರಿಯ ಫೈಲ್‌ನ ಮೇಲೆ ಕಣ್ಣಾಡಿಸಿ ಪಾಂಬುವಿನ ಹೇಳಿಕೆಯನ್ನು ನೋಡಿಕೊಂಡ.

‘ಕುಡಿದವರು ಯಾವತ್ತು ಸುಳ್ಳು ಹೇಳುವುದಿಲ್ಲ ಅನ್ನುವುದನ್ನು ಕೇಳಿದ್ದೇನೆ. ಆದರೆ ನೀನು ನಿನ್ನೆ ಆ ಮತ್ತಿನಲ್ಲಿಯೂ ಉದ್ದೇಶಪೂರ್ವಕವಾಗಿ ಕೆಲವೊಂದು ವಿಷಯಗಳನ್ನು ಮರೆಮಾಚಿದಂತೆ ಕಾಣಿಸುತ್ತಿದೆ. ಕಾಕುಟ್ಟನ ಬಗ್ಗೆ ನೀನು ಏನನ್ನೂ ಹೇಳಿಲ್ಲ’ ಆರೋಪವಿತ್ತು ಪೊಲೀಸ್ ಅಧಿಕಾರಿಯ ದನಿಯಲ್ಲಿ. ಪಾಂಬು ಎಲ್ಲವನ್ನೂ ಹೇಳಿ ಬಿಡುವಂತೆ ಕಂಡ. ಮುತ್ತುಚಾಂಡಿಯ ಮುಖವನ್ನೊಮ್ಮೆ ನೋಡಿ ಪೀಠಿಕೆ ಹಾಕಿದ.

‘ದಯವಿಟ್ಟು ನಾನು ನಿಮ್ಮಿಂದ ಈ ವಿಷಯವನ್ನು ಮುಚ್ಚಿಟ್ಟಿದ್ದಕ್ಕೆ..’

ಇನ್ಸ್‌ಪೆಕ್ಟರ್ ನ ಹುಬ್ಬುಗಳು ಬೆಸೆದುಕೊಂಡವು. ಅಪರಾಧಿಯ ಮುಖದಲ್ಲಿ ಎಲ್ಲವನ್ನೂ ಹೇಳಿ ಬಿಡುವ ತವಕವಿತ್ತು. ಅವನ ಹೇಳಿಕೆಯ ಮೇಲೆ ಅಪರಾಧಿಯನ್ನು ಹಿಡಿಯುವುದು ಸುಲಭವಾಗಿತ್ತು.

‘ಎಸ್ ಪಾಂಬು, ಹೇಳು. ಯಾವ ವಿಷಯವನ್ನು ಮುಚ್ಚಿಟ್ಟಿದ್ದೆ’

‘ಹಿತೇಶನ ವಿಷಯ’ ನೇರವಾಗಿ ವಿಷಯಕ್ಕೆ ಇಳಿದ ಪಾಂಬು. ಇನ್ಸ್‌ಪೆಕ್ಟರ್ ನ ಮುಖದಲ್ಲಿ ಬದಲಾವಣೆಯಾಯಿತು. ಪಿಸಿಯನ್ನು ಕರೆದು ಲಹರಿಯ ಫೈಲನ್ನು ಅವನ ಕೈಗಿತ್ತು ಕಣ್ಣಿನಲ್ಲಿಯೇ ಪಾಂಬು ಹೇಳುವ ವಿಷಯಗಳನ್ನು ಬರೆದು ಕೊಳ್ಳುವಂತೆ ಸೂಚಿಸಿದ. ಪಿಸಿ ಪಾಂಬುವಿನ ಹೇಳಿಕೆಯನ್ನು ತಾನೆ ಬರೆದುಕೊಳ್ಳಲು ಸಜ್ಜಾದ.

‘ಹಿತೇಶ ಯಾರು? ಕಾಕುಟ್ಟನ ವಿಷಯಕ್ಕೆ ಹೇಗೆ ಸಂಬಂಧ?’ ಅಧಿಕಾರಿ ಅರ್ಥವಾಗದ ಹೆಸರನ್ನು ಕೇಳಿ ಪ್ರಶ್ನಿಸಿದ.

‘ಹಿತೇಶ ನಿಮಗೆ ಲಹರಿಯ ಕೇಸ್ಗೆ ಅಗತ್ಯವಾಗಿ ಬೇಕಾಗಿರೋ ವ್ಯಕ್ತಿ’

‘ಲಹರಿಯ ಕೇಸ್‌ಗೆ ಬೇಕಾಗಿರೋ ವ್ಯಕ್ತಿ, ಅಂದ್ರೆ ಮರಳು ದಿಣ್ಣೆಯಲ್ಲಿ ಓಡಾಡಿಕೊಂಡಿರುತ್ತಿದ್ದಾತ?’

‘ಹೌದು, ಲಹರಿ ಜೀವಂತವಿರುವಾಗಲೂ ಅವಳ ಜೊತೆಗೆ ಓಡಾಡಿಕೊಂಡಿದ್ದ ವ್ಯಕ್ತಿ. ಈಗಲೂ ಲಹರಿಯನ್ನು ಹುಡುಕುವ ಹುಚ್ಚು ಸಾಹಸದಲ್ಲಿ ಮರಳು ದಿಣ್ಣೆಯಲ್ಲಿ ಓಡಾಡಿಕೊಂಡಿದ್ದವನು’

‘ಅರ್ಥವಾಯ್ತು, ನೀನು ಆ ವ್ಯಕ್ತಿಯನ್ನೇ ನಮಗೆ ಪರಿಚಯಿಸುತ್ತೇನೆ ಅಂದಿದ್ದು. ಅಲ್ಲವೆ ಪಾಂಬು’

‘ಹೌದು’

‘ಆದ್ರೆ, ನೀವು ಇಲಾಖೆಯ ಜೊತೆಗೆ ಆಟವಾಡ್ದೆ. ಆ ಹುಡುಗನನ್ನು ನಮಗೆ ಪರಿಚಯಿಸ್ಲೇ ಇಲ್ಲ’

‘ಕ್ಷಮಿಸ್ಬೇಕು ನೀವು ನನ್ನ. ಅವನನ್ನು ಮುಚ್ಚಿಡುವ ಯಾವ ದುರುದ್ದೇಶವೂ ನನಗಿರಲಿಲ್ಲ. ಅವನು ಸ್ವತಂತ್ರವಾಗಿ ಮರಳು ದಂಡೆಯಲ್ಲಿ ಓಡಾಡಿಕೊಂಡಿದ್ದ. ನೀವು ಅನುಮಾನದಿಂದಲಾದರೂ ಅವನನ್ನು ಹಿಡಿಯಬಹುದಿತ್ತು’

‘ಪಾಂಬು, ನಿನ್ನ ಮೇಲೆ ಇಲಾಖೆ ಅತೀವ ವಿಶ್ವಾಸವಿಟ್ಟಿತ್ತು. ಆದರೆ ನೀನು ಅದನ್ನು ಹಾಳು ಮಾಡಿಕೊಂಡೆ’

‘ಕ್ಷಮಿಸಿ ಸಾಹೇಬ್ರೆ, ನನ್ನ ಮೇಲೆ ಇಲಾಖೆ ಇಟ್ಟಿರೋ ವಿಶ್ವಾಸಕ್ಕೆ ಕೃತಜ್ಞತೆಗಳು. ನಾನು ಆ ವಿಶ್ವಾಸನ ಹಾಳು ಮಾಡಿಕೊಂಡಿಲ್ಲ’

‘ಅದನ್ನು ನೀನು ತಿಳಿಸಬೇಕಾದರೆ ಹಿತೇಶನನ್ನು ನಮ್ಮ ವಶಕ್ಕೆ ಒಪ್ಪಿಸು’

ಪಾಂಬು ಬೆಪ್ಪನಂತೆ ನಿಂತ. ಮೈ ಬೆವರತೊಡಗಿತು. ಮೆಲ್ಲಗೆ ಮಾತು ತೆಗೆದ.

‘ಅದು ಅಸಾಧ್ಯ. ಹಿತೇಶ ಕೂಡ ನಾಲ್ಕೈದು ದಿವಸದಿಂದ ಕಾಣಿಸ್ತಿಲ್ಲ’

ಅಧಿಕಾರಿಯ ನೋಟ ಮೊನಚಾಯಿತು.

12

ಪೊಲೀಸ್ ಠಾಣೆಯ ಮೆಟ್ಟಿಲೇರಿದ ಪಾಂಬು ತನ್ನ ಜೊತೆಗಿದ್ದ ಮುತ್ತುಚಾಂಡಿಯನ್ನು ಧೈರ್ಯಕ್ಕೆ ಕರೆದುಕೊಂಡು ಬಂದಿದ್ದ. ಹಿತೇಶನ ಬಗ್ಗೆ ಸವಿವರವಾಗಿ ಮಾತನಾಡುವ ಸಲುವಾಗಿ ಇನ್ಸ್‌ಪೆಕ್ಟರ್ ರಾಜಧಾನಿ ಅವನನ್ನು ಸ್ಟೇಶನ್‌ಗೆ ಬರುವಂತೆ ತಿಳಿಸಿದ್ದ.

ಮುತ್ತುಚಾಂಡಿ ಕೂಡ ಪಾಂಬುವನ್ನು ಅದೇ ಉದ್ದೇಶದಿಂದ ತನ್ನ ಹಳೆಯ ಕಟ್ಟಡದ ಕೋಣೆಯಿಂದ ಢಾಬಾಕ್ಕೆ ಕರೆದುಕೊಂಡು ಬಂದಿದ್ದ. ಅಷ್ಟರಲ್ಲಿಯೇ ಪೊಲೀಸರ ಪ್ರವೇಶವಾಗಿತ್ತು. ಎಲ್ಲವನ್ನೂ ಇನ್ಸ್‌ಪೆಕ್ಟರ್‌ಗೆ ಹೇಳಿ ನಿರಾಳವಾಗಲಿ ಎಂದುಕೊಂಡಿದ್ದ. ಆದರೆ ಹಿತೇಶನ ಬಗ್ಗೆ ವಿಷಯಗಳನ್ನು ಗುಟ್ಟಾಗಿ ಇಟ್ಟದ್ದಕ್ಕೆ ಶಿಕ್ಷೆಯೆಂಬಂತೆ ಪೊಲೀಸ್ ಅಧಿಕಾರಿ ಪಾಂಬುವನ್ನು ಸ್ಟೇಶನ್‌ಗೆ ಕರೆಸಿದ್ದ.

ಠಾಣೆಯ ಬಲಭಾಗದ ಚೇಂಬರ್‌ನಲ್ಲಿ ಇನ್ಸ್‌ಪೆಕ್ಟರ್ ರಾಜಧಾನಿ ಪಾಂಬುವಿನ ನಿರೀಕ್ಷೆಯಲ್ಲಿ ಕುಳಿತಿದ್ದ. ಪಾಂಬು ಅಳುಕುತ್ತಲೇ ಇನ್ಸ್‌ಪೆಕ್ಟರ್‌ನ ಕೋಣೆಯನ್ನು ಇಣುಕಿದ. ಪಿಸಿ ಸಾರಂಗ ಅವನನ್ನು ಗಮನಿಸಿ ಅಧಿಕಾರಿಗೆ ತಿಳಿಸಿದ. ಅಧಿಕಾರಿ ಪಿಸಿಯ ಮೂಲಕ ಸ್ವಲ್ಪ ಹೊತ್ತು ಹೊರಗಡೆ ಕಾಯುವಂತೆ ಹೇಳಿ ತನ್ನ ಕೆಲಸದಲ್ಲಿ ಮಗ್ನನಾದ. ಪಿಸಿ ಸಾರಂಗ ಕೂಡ ಹೊರಗೆ ಬಂದು ನಿಂತ.

‘ಸಾಹೇಬ್ರು, ಬ್ಯುಸಿಯಾಗಿದ್ದಾರೆ. ಸ್ವಲ್ಪ ಹೊತ್ತು ಕಾಯ್ಬೇಕಾಗುತ್ತೆ’

ಕಾಯುವುದಕ್ಕೂ ಪಾಂಬು ತಯಾರಾಗಿಯೇ ಬಂದಿದ್ದ. ತನಗೆ ತಿಳಿದಿರುವ ವಿಷಯವನ್ನೆಲ್ಲಾ ಹೇಳಿ ಮುಗಿಸಿದರೆ ನಿರಾಳನೆನ್ನುವ ಭಾವನೆ.

‘ಈಗ ಆ ಹಿತೇಶ ಎಲ್ಲಿದ್ದಾನೆ?’ ಪಿಸಿ ಅನಗತ್ಯ ಅವನನ್ನು ಪ್ರಶ್ನಿಸಿದ.

‘ನಂಗೂ ಗೊತ್ತಿರದ ವಿಷಯ ಅದು. ಅವನ ಬಗ್ಗೆ ಗೊತ್ತಿದ್ದರೆ ಈಗಲೇ ನಿಮಗೆ ತಿಳಿಸುತ್ತಿದ್ದೆ’

ಪಿಸಿಯ ಪಿತ್ತ ನೆತ್ತಿಗೇರಿತು. ಪಾಂಬುವನ್ನು ತಿನ್ನುವಂತೆ ನೋಡಿದ.

‘ನಿಂಗೆ ಗೊತ್ತಿರುವಾಗ ಅವನನ್ನು ಮುಚ್ಚಿಟ್ಟೆ. ಈಗ ಅಧಿಕ ಪ್ರಸಂಗ ಮಾತನಾಡುತ್ತಿರುವೆ. ನಿಂಗೆ ನೆನಪಿದೆಯಲ್ಲವೆ, ಆ ದಿನ ಮರಳು ದಿಣ್ಣೆಯ ಬಳಿ ಅವನು ನಿನ್ನ ಕಾರಿನೊಳಗಿದ್ದ. ಆ ಸಮಯದಲ್ಲಿ ನೀನು ಇನ್ಸ್‌ಪೆಕ್ಟರ್ ರವರ ಜೊತೆಗೆ ಮಾತನಾಡುತ್ತಿದ್ದೆ’

ಪಾಂಬು ಪಿಸಿಯ ಮಾತು ಕೇಳಿ ಹಿಂದಿನದ್ದನ್ನ ಮೆಲುಕು ಹಾಕುವುದಕ್ಕೆ ಪ್ರಯತ್ನಿಸಿದ. ನೆನಪಿಗೆ ಬರದ ವಿಷಯ ಅದು. ಮರೆತಂತೆ ಕುಳಿತ. ಪಿಸಿ ಸಾರಂಗ ಬಹಳ ಆತ್ಮೀಯನಾಗಿದ್ದವನು. ಆದರೆ ತನ್ನ ಅದೃಷ್ಟ ಈಗ ಕೈ ಕೊಟ್ಟಿರುವುದರಿಂದ ಯಾವುದೂ ಪ್ರಯೋಜನಕ್ಕೆ ಬಾರದು.

‘ನಂಗೆ ನೆನಪಾಗ್ತಿಲ್ಲ. ಇದ್ದಿರಬಹುದು’

‘ಇದ್ದಿರಬಹುದೇನು. ಇದ್ದ... ನೀನು ನಮಗೆ ಚಳ್ಳೆ ಹಣ್ಣು ತಿನಿಸುವುದಕ್ಕೆ ನೋಡ್ದೆ. ಈಗ ಅದೇ ನಿನ್ನ ಕುತ್ತಿಗೆಗೆ ಉರುಳಾಗಿದೆ. ನೀನು ಅನುಭವಿಸ್ಬೇಕು’

ಪಾಂಬು ಬೆದರಿದಂತೆ ಮುಖ ಮಾಡಿದ. ಪ್ರತೀಯೊಬ್ಬರಿಗೂ ಒಂದೊಂದು ಕೆಟ್ಟ ಸಮಯ ಅಂತಿರುತ್ತೆ. ಈಗ ತನ್ನದು ಕೆಟ್ಟ ಸಮಯ. ಉಗುಳು ನುಂಗಿ ಕೊಂಡ. ಒಳಗಿನಿಂದ ಕರೆ ಗಂಟೆಯ ಸದ್ದು ಕೇಳಿತು. ಪಿಸಿ ಇನ್ಸ್‌ಪೆಕ್ಟರ್‌ನ ಛೇಂಬರಿಗೆ ನಡೆದ. ಎರಡು ನಿಮಿಷದಲ್ಲಿಯೇ ಹೊರಗೆ ಬಂದು ಪಾಂಬುವನ್ನು ಒಳಗೆ ಕರೆದ. ಮುತ್ತುಚಾಂಡಿ ಅದು ತನಗೇನೂ ಸಂಬಂಧಿಸಿದ್ದಲ್ಲವೆನ್ನುವಂತೆ ದೂರದಲ್ಲಿಯೇ ಕುಳಿತಿದ್ದ. ಪಾಂಬು ಎದ್ದು ಅವನ ಹತ್ತಿರಕ್ಕೆ ಬಂದು ನಿಂತ.

‘ನೀನು ಒಳಗೆ ಬರುವುದಿಲ್ಲವೆ?’

‘ಇಲ್ಲ, ನೀನು ಈಗ ಹೇಳಬೇಕಾಗಿರುವುದು ಹಿತೇಶನ ಬಗ್ಗೆ. ಅವನ ಬಗ್ಗೆ ನಿನಗೆ ಏನು ತಿಳಿದಿದೆಯೋ ಅಲ್ಲಿಯವರೆಗೆ ಎಲ್ಲವನ್ನು ನೀನು ಚಾಚೂ ತಪ್ಪದೆ ಹೇಳಿ ಬಿಡು’ ಮುತ್ತುಚಾಂಡಿ ಎಚ್ಚರಿಕೆಯ ನುಡಿಗಳನ್ನು ಹೇಳಿದ.

ಪಾಂಬು ನಿರಾಶನಂತೆ ಸೋತ ಹೆಜ್ಜೆಗಳನ್ನಿಟ್ಟು ಒಳಗೆ ನಡೆದ.

**(ಸಶೇಷ)**